# ಹಸಿವಾಯಿತೇ ಕಂದಾ



ಯಾಕಪ್ಪಾ ನನ್ನ ಕಂದಾ ಹೊಟ್ಟೆ ಹಸಿಯಿತೇ?
ಮತ್ಯಾಕೆ ಹಂಗೆ ತಿರುತಿರುಗಿ ನೋಡುವೆ?
ಹೆದರದಿರು ಬರುತಿಹೆನು ನಿನ್ನ ಹಿಂದೆಯೇ
ಎತ್ತಿಕೊಳ್ಳಲಾರೆ ನಿನ್ನ, ಭಾರವ ಹೊತ್ತಿಹೆ ಚಿನ್ನ

ಗುಡ್ಡ ದಾಟಿದ ತಕ್ಷಣ ಕಾಣುವ ಕೆರೆಯು
ನೀರಲ್ಲಿ ನೋಡು ಒಗೆಯಬೇಕಿದೆ ಅರಿವೆಯಾ
ನಿನ್ನಪ್ಪ ಹೊತ್ತಿರುವನಲ್ಲ ಅದೇ ಗಂಟು
ನಮ್ಮ ಜನುಮಕೆ ಅದು ಬಿಡಿಸಲಾರದ ನಂಟು

ಹಟ ಮಾಡಬೇಡ, ಕೊಸರಾಡಬೇಡ
ಅಪ್ಪನ ಹೆಜ್ಜೆ ಅಲುಗಾಡಿದರೆ ಅದುರುವುದು ಬದುಕು
ಅವನೊಬ್ಬ ನಮ್ಮ ಜೊತೆಯಲ್ಲಿದ್ದರೆ ಸಾಕು
ಬಿರುಗಾಳಿ ಬೀಸಿದರೂ ಆರದು ಬೆಳಕು

ಉಣ್ಣುವೆಯಂತೆ ನೋಡು ಇನ್ನೇನು ಬಂತು ಕೆರೆ
ನೀರು, ಬುರುಗಿನ ಜೊತೆ ಆಡುವೆಯಂತೆ ನನ್ನ ದೊರೆ

● **ನಳಿನಿ ಟಿ. ಭೀಮಪ್ಪ**

# ನಾಳೆಗಳು ಹಸಿರಾಗಲಿ

ಅಮ್ಮ ಬೇಗ ಬಾರೆ
ನಿನ್ನ ಮೊಗವ ತೋರೆ
ಅಪ್ಪನ ಹೆಗಲು ಇರಲು
ನಿನ್ನ ನಗುವ ನೋಡಲು
ಸದಾ ನಗುವೆ ನಾನು

ನಿನ್ನ ನಾಳೆಗಳು ಹಸಿರಾಗಿರಬೇಕು
ನಿನ್ನ ಅಪ್ಪನ ಹೆಗಲ ಮೇಲೆ ಬಟ್ಟೆಯ ಗಂಟು
ಬದುಕಿನ ಮೇಲೆ ಭರವಸೆ ಇರಬೇಕು
ನೋಡಲ್ಲಿ ಬಂಡೆಗಳ ನಡುವೆ ಹಸಿರು ಉಂಟು
ಕಬ್ಬಿನ ಬಂಡಿ ಸಾಗಲು

ನಾಲ್ಕು ಗಾಲಿ ಬೇಕು
ಸಂಸಾರದ ಬಂಡಿ ನಡೆಯಲು
ಅಪ್ಪಅಮ್ಮ ಸಾಕು

ಕಂದಾ ನಾವು ಕೂಡಿಯೋಣ
ಕಬ್ಬಿನ ಹಾಲು
ದಣಿವು ನೀಗಿಸಲು
ಆದೋ ಅವರು ಮಾರುವರು
ಕಬ್ಬಿನ ಹಾಲು
ಬದುಕು ಸಾಗಿಸಲು

● **ಕೊಟ್ರೇಶ ಅಕ್ಕಿ**